ದಿಃ 16-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ ಪಿ ಬಿ ಎ ವಕೀಲರಿಂದ.

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೆನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ಒಂದು ಭಾವಚಿತ್ರ ಮತ್ತು ಅದಕ್ಕೆ ಸಂಬಂಧಿಸಿದ ಒಂದು ಸಿಡಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಪುರಾವೆಗೊಳಪಟ್ಟು ಕ್ರಮವಾಗಿ ನಿಪಿ 1 ಮತ್ತು 2 ಎಂದು, ಅಸಲು ದಾವಾ ಸಂಖ್ಯೆ 171/2007 ರ ವಾದ ಪತ್ರ, ಪ್ರತಿವಾದ ಪತ್ರ, ತೀರ್ಪು ಹಾಗೂ ಡಿಕ್ರಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 6 ಎಂದು, ಸಿ ಟಿ ಎಸ್ ನಂಬರ 701 ರ ರೂಲ್ಡ್ ಮತ್ತು ನಕ್ಷೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ 7 ಎಂದು, ಸಿ ಟಿ ಎಸ್ ನಂಬರ 701 2023-2024 ನೇ ಸಾಲಿನ ಆಸ್ತಿ ತೆರಿಗೆ ರಜಿಸ್ಟರ ನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು, ಎರಡು ಕಂದಾಯ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 9 ಮತ್ತು 10 ಎಂದು, ವಿದ್ಯುತ್ ಬಿಲ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ 11 ಎಂದು, ಪಟ್ಟಣ ಪಂಚಾಯತಿ ಹಳಿಯಾಳ ರವರು ನನ್ನ ಹೆಸರಲ್ಲಿ ನೀಡಿದ ಬೀದಿ ವ್ಯಾಪಾರಿಯ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 12 ಎಂದು, ದಿನಾಂಕ 02-04-2012 ರಂದು ತಹಶೀಲ್ದಾರ ಹಳಿಯಾಳ ರವರು ನೀಡಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 13 ಎಂದು, ದಿನಾಂಕ 21-01-2016 ರಂದು

ಪುರಸಭೆ ಹಳಿಯಾಳ ರವರು ನೀಡಿದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 14 ಎಂದು, ನನ್ನ ಮಗನಾದ ನಿಖಿಲ್ ಶಾಪೂರಕರ್ ರವರ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 15 ಎಂದು, ನನ್ನ ಇನ್ನೊಬ್ಬ ಮಗನಾದ ರಾಜು ಶಾಪೂರಕರ್ ರವರ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 16 ಎಂದು, ವಾಯುಸೇನೆ ಬೆಳಗಾವಿ ರವರು ದಿನಾಂಕ 07-12-2001 ರಂದು ಬರೆದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 17 ಎಂದು, ನನ್ನ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 18 ಎಂದು, ದಿನಾಂಕ 02-01-1986 ರ ನೋಂದಾಯಿತ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 19 ಎಂದು, ದಿನಾಂಕ 22-08-1990 ರ ಮೃತ್ಯು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 20 ಎಂದು, ಗುರುರಾಜ ಪಾಕ್ರಿ, ಶ್ರೀನಾಥ ಪಾಕ್ರಿ, ವಿಠ್ಠಲ ಪಾಕ್ರಿ, ವಿಠ್ಠಲ ಪಾಕ್ರಿ ರವರ ನಾಲ್ಕು ಶಾಲಾ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 21 ರಿಂದ 24 ಎಂದು, ಕಾಪೂರಕರ್ ನಿಂಗವ್ವ ರವರ ಮತದಾನ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 25 ಎಂದು, ಚನ್ನಪ್ಪ ಕಾಪೂರಕರ್ ರವರ ಕನ್ನಡ ಮಾಧ್ಯಮ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 26 ಎಂದು, ಕಲ್ಲವ್ವ ಚನ್ನಪ್ಪ ಕಾಪೂರಕರ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 27 ಎಂದು, ಕಲ್ಲವ್ವ ಶಹಾಪೂರಕರ ರವರ ಆದಾಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 28 ಎಂದು, ಕಲ್ಲವ್ವ ಚನ್ನಪ್ಪ ಶಹಾಪೂಕರ್ ರವರಿಗೆ ನಗರ ಸಭೆ ಹಳಿಯಾಳ ರವರು ದಿನಾಂಕ 06-08-1983 ರಂದು ನೀಡಿದ ಸೂಚನಾ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 29 ಎಂದು, ಪಟ್ಟಣ ಪಂಚಾಯತ ಹಳಿಯಾಳ ರವರು ದಿನಾಂಕ 26-07-1980 ರಂದು ನೀಡಿದ ನೊಟೀಸ್ ಚಿಬ್ಬಲಗೇರಿ ಗ್ರಾಮ ಪಂಚಾಯತಿ ರವರು ದಿನಾಂಕ 11-03-2008 ರಂದು ನೀಡಿದ ರಹವಾಸಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 30 ಎಂದು ಗುರುತಿಸಲಾಯಿತು.

O.S.No.64/2023 further chief of PW1

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸರಿ ಅದೆ

ದಿವಾಣಿ ನ್ಯಾಯಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.